ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

ನಿಮ್ಮ ದೃಷ್ಟಿಯಲ್ಲಿ ನಿಜವಾದ ಬಿಗ್ ಬಾಸ್ ಯಾರು ರಾಂ?



ಆತ್ಮಸಾಕ್ಷಿ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

ಪ್ರಜಾಪ್ರಭುತ್ವದಲ್ಲಿ ಮೌಲ್ಯಗಳೇಕೆ ಕುಸಿಯುತ್ತಿವೆ?

ಪ್ರಜಾಪಶುತ್ವ ಹೆಚ್ಚುತ್ತಿರುವುದರಿಂದ.

ಬಿ.ವಿ. ಕೃಷ್ಣೇಗೌಡ, ಬೆಂಗಳೂರು

ಅವಿವಾಹಿತೆ Miss; ವಿವಾಹಿತೆ Mrs; ಅವಿವಾಹಿತ ಪುರುಷ Mr; ವಿವಾಹಿತ ಪುರುಷ?

Misery!

ಪಿ.ಎನ್. ಶ್ರೀವತ್ಸ, ಬೆಂಗಳೂರು

ಮೋಸ: ಇದರ ನಿಜವಾದ ಅರ್ಥ?

ಸಂಪೂರ್ಣ ನಂಬಿಕೆಯ ನೆರಳು.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

ಅಷ್ಟೊಂದು ಉಪಯೋಗವಿರುವ 'ರೈಲು' ಎಂಬ ಪದವನ್ನು 'ಸುಳ್ಳು' ಎಂಬರ್ಥದಲ್ಲಿ ಏಕೆ ಬಳಸುತ್ತಾರೆ?



ವರ್ಷಗಟ್ಟಲೆ ವೇಳಾಪಟ್ಟಿ ತೋರುವ ಸಮಯಕ್ಕಿರಲಿ, ಆ ದಿನವೇ ಬಾರದೆ ಸುಳ್ಳಾದುದರ ಫಲ.

ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

ಪಕ್ಷಾಂತರ, ದೇಶಾಂತರ; ಇವುಗಳ ಒಳಮರ್ಮ ಏನು ಗುರುವೆ?

ಲಕ್ಷಾಂತರ ಪಡೆದರೆ ಪಕ್ಷಾಂತರ; ಕೋಟ್ಯಂತರ ಹೊಡೆದರೆ ದೇಶಾಂತರ.

ಮೋಹನರಾಜು ಎಸ್.ಎ. ಶಂಕರಘಟ್ಟ

ಆಪ್ತಮಿತ್ರನಿಲ್ಲದಿದ್ದರೂ ಪರವಾಗಿಲ್ಲ, ಹಿತಶತ್ರುವಿನಿಂದ ದೂರವಿರಬೇಕಂತೆ. ನಿಜವೆ?

ಈ ವಾಕ್ಯ ಅರ್ಧಸತ್ಯ. ಹಿತಶತ್ರುವಿನಿಂದ ದೂರವಿರಬೇಕು. ಆದರೆ ಆಪ್ತಮಿತ್ರನಿಲ್ಲದ ಬದುಕು ಬದುಕಲ್ಲ.

ಪಿ.ಜೆ. ರಾಜ್, ಶಿವಮೊಗ್ಗ

ಕೈ ಕೆಸರಾದರೆ ಬಾಯಿ ಮೊಸರು. ಮನಸ್ಸು ಕೆಸರಾದರೆ?

ತಲೆ ಕೆಟ್ಟು ಮೊಸರು ಗಡಿಗೆ.

ರಮೇಶ್, ಹನುಮನಾಳು

ಕೇಳಿ ಪಡೆದ ಸುಖಕ್ಕೂ, ಕದ್ದು ಪಡೆದ ಸುಖಕ್ಕೂ ಏನು ವ್ಯತ್ಯಾಸ?

ಕದ್ದು ಪಡೆದ ಸುಖಕ್ಕೆ ಹೆಚ್ಚು ದಂಡ ತೆರಬೇಕಾಗುತ್ತದೆ.

ಎಚ್.ಆರ್. ದೇಸಾಯಿ, ರಾಯಚೂರು

ನನ್ನ ಬಂಗಾರಕ್ಕೆ ಸಾಲ ಕೊಡುತ್ತಾರೆ. ಅದೇ ನನ್ನ ಮುಖಕ್ಕೆ ಏಕೆ ಸಾಲ ಕೊಡುವುದಿಲ್ಲ?

ಛೆ! ಈ ಮಟ್ಟಕ್ಕೆ ನಿಮ್ಮ ಸ್ನೇಹಿತರ ನಂಬಿಕೆ ಕಳೆದುಕೊಳ್ಳಬಾರದಾಗಿತ್ತು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

'ಗುರು' ಮತ್ತು 'ಗುರಿ'ಗಳಿಗೆ ಏನು ವ್ಯತ್ಯಾಸ?

ಚಿತ್ತವನ್ನು ಹದಗೊಳಿಸುವವನು ಗುರು; ಚಿತ್ತವನ್ನು ಮುದಗೊಳಿಸುವುದು ಗುರಿ.

ಜೆ. ಪ್ರದೀಪ್‌ಕುಮಾರ್, ಹೂವಿನಹಡಗಲಿ

ಈಗಿನ ಯುವಕರು ಸದಾ ಮೊಬೈಲ್/ ಅಂತರ್ಜಾಲದಲ್ಲಿ ಮುಳುಗಿರುವುದು ಅಭಿವೃದ್ಧಿಯ ಸಂಕೇತವೋ, ಅವನತಿಯದೋ?

ಮುಕ್ತವಾಗಿ ನೋಡುತ್ತಿದ್ದರೆ ಅಭಿವೃದ್ಧಿ; ಗುಪ್ತವಾಗಿ ನೋಡುತ್ತಿದ್ದರೆ ಅವನತಿ.

ಕೆ.ಎಂ. ವಿಭೂತಿ, ಹರಿಹರ

ಇಲ್ಲೊಬ್ಬ ನಾಡಿನಲ್ಲಿದ್ದರೂ ಅವನ ವರ್ತನೆ ಆದಿಮಾನವನ ರೀತಿಯಲ್ಲಿ ಇರಲು ಕಾರಣವೇನು?

ಜೀನ್ ಎಡಿಟಿಂಗ್ ಮಾಡುವಾಗ ವೈರಸ್ ಅಟ್ಯಾಕ್ ಆಗಿ ಹುಟ್ಟಿದವನಂತೆ.

ಪ್ರದೀಪ್ ಜಿ. ಎಚ್.

ನಗರಪ್ರದೇಶಗಳಲ್ಲಿ ಅಂಗಡಿ, ಹೋಟೆಲ್‌ಗಳಿಗೆ ಹಳ್ಳಿಮನೆ, ಗೌಡ್ರಮನೆ, ನಾಟಿಮನೆ ಎಂದೆಲ್ಲ ಹೆಸರಿಡುವುದೇಕೆ?

ಹಾಗೆಂದು ಕಲ್ಲು ಬೀಸಿದರೆ ಜನ ಸೊಪ್ಪು ಹಾಕುತ್ತಾರೆಂದು ತಿಳಿದಿರುವುದರಿಂದ.

## ಬಹುಮಾನಿತ ಪ್ರಶ್ನೆ

ಭಾರತಿ ಮಾನಗೆ, ಹೊನ್ನಾವರ

ಮನೆಹಬ್ಬಕ್ಕೂ, ನಗೆಹಬ್ಬಕ್ಕೂ ಏನು ವ್ಯತ್ಯಾಸ?

ಮನೆಹಬ್ಬದಲ್ಲಿ ಮಾಡಿದ್ದನ್ನೇ ಮಾಡುತ್ತಾರೆ, ನಗೆಹಬ್ಬದಲ್ಲಿ ಹೇಳಿದ್ದನ್ನೇ ಹೇಳುತ್ತಾರೆ.

ವಿ. ಹೇಮಂತಕುಮಾರ್, ಬೆಂಗಳೂರು

ಒಂದು ಮೋಡದೊಳಗೆ ಎಷ್ಟು ಹನಿ ಇದೆಯೆಂದು ಹೇಳಲು ಸಾಧ್ಯವೆ?

ಮೇಘರಾಜ ಕೇರಾಫ್ ವರ್ಷ ಇಲಾಖೆ, ದೇವಲೋಕ ಇಲ್ಲಿಗೆ ಆರ್‌ಟಿಐ ಅರ್ಜಿ ಸಲ್ಲಿಸಿ ತಿಳಿಯಬಹುದು.

ಸುಂದರ್, ಬೆಂಗಳೂರು

ಸಪ್ತಪದಿಯ ನಂತರವೂ ಗಂಡು ಅಷ್ಟ, ನವ, ಇತ್ಯಾದಿ ಹೆಜ್ಜೆ ಇಡಲು ಹಾತೊರೆಯುವುದೇಕೆ?

ಆ ವಿಷಯದಲ್ಲಿ ಗಂಡು 'man's best friend'ನೇ ಅನುಸರಿಸುವುದರಿಂದ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ಜೀವ ಕೊಟ್ಟವಳು ತಾಯಿ ಆದರೆ ತಂದೆ?



ಆ ಜೀವವನ್ನು ಗೊಬ್ಬರ ಹಾಕಿ ಬೆಳೆಸುವ ಮಾಲಿ.

ಎಸ್.ಕೆ. ಹೆಬ್ಬಾರ, ಕೋಣೆ

ಪ್ರೀತಿಗೆ ಕಣ್ಣಿಲ್ಲವಂತೆ, ಹೌದೆ?

ಇವೆಯಲ್ಲ. ಕಣ್ಣಷ್ಟೇ ಅಲ್ಲ, ದೂರದೃಷ್ಟಿ, ವ್ಯವಹಾರದೃಷ್ಟಿಗಳೂ ಇವೆ ಪ್ರೀತಿ ಝಿಂಟಾಗೆ.

ಎಚ್. ಆನಂದ್‌ಕುಮಾರ್, ಚಿತ್ರದುರ್ಗ

ಭಾರತೀಯರು ಭೋಜನಪ್ರಿಯರೋ, ಬಹುಜನ ಪ್ರಿಯರೋ?

ಸದ್ಯದ ಕಾಲದಲ್ಲಂತೂ ಜಂಕ್ ಫುಡ್ ಪ್ರಿಯರು.

■ ರಾಮ್